ಅ) ರಾಜ್ಯದಲ್ಲಿ ಕಾಯ್ದಿರಿಸಿರುವ ಅರಣ್ಯ ಪ್ರದೇಶವೆಷ್ಟು;

ಆ) ವನ್ಯ ಮೃಗಗಳ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಇ) 1990 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಆನೆಗಳು ಕಾಡಿನಲ್ಲಿ ಸತ್ತಿವೆ;

ಈ) ರಾಜ್ಯದಲ್ಲಿ ಇರುವ ಹುಲಿಗಳ ಸಂಖ್ಯೆ ಎಷ್ಟು?

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) :

ಅ) ರಾಜ್ಯದಲ್ಲಿ ಕಾಯ್ದಿರಿಸಿರುವ ಅರಣ್ಯ ಪ್ರದೇಶ 38,284 ಚ.ಕಿ.ಮೀ.ಗಳು

ಆ) ರಾಜ್ಯದಲ್ಲಿ 5 ರಾಷ್ಟ್ರೀಯ ಉದ್ಯಾನವನಗಳು ಮತ್ತು 21 ಅಭಯಾರಣ್ಯಗಳು ಇದ್ದು, ಅವುಗಳಲ್ಲಿ ವನ್ಯಮೃಗಗಳ ರಕ್ಷಣೆಗೆ ಕಳ್ಳಬೇಟೆ ತಡೆಗಾಗಿ, ಕ್ಯಾಂಪ್‌ಗಳನ್ನು ಸ್ಥಾಪಿಸಲಾಗಿದೆ. ವನ್ಯ ಪ್ರಾಣಿಗಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಕೆರೆಗಳನ್ನು ನಿರ್ಮಿಸಲಾಗಿದೆ. ಕೆರೆಗಳ ಹೂಳೆತ್ತುವುದು, ಜೆಕೆಡ್ಯಾಂ ನಿರ್ಮಾಣ, ಉಪ್ಪುದಾಣಗಳ ನಿರ್ಮಾಣ, ಬೆಂಕಿ ತಡೆಗಟ್ಟುವಿಕೆ, ಪರಿಸರ ಅಭಿವೃದ್ಧಿ ಇತ್ಯಾದಿ.

ಇ) 1990 ರಿಂದ ಈವರೆವಿಗೆ ರಾಜ್ಯದಲ್ಲಿ 661 (ಆರು ನೂರಾ ಅರವತ್ತಾ ಒಂದು) ಆನೆಗಳು ಸತ್ತಿದೆ ಇವುಗಳಲ್ಲಿ ಸ್ವಾಭಾವಿಕವಾಗಿ 444 ಆನೆಗಳು ಸತ್ತಿವೆ. ಕಳ್ಳಬೇಟೆಯಿಂದ 142 ಆನೆಗಳು ಸತ್ತಿವೆ. ಆಕಸ್ಮಿಕ (ವಿದ್ಯುತ್ ಅಪಘಾತ)ವಾಗಿ 75 ಆನೆಗಳು ಸತ್ತಿವೆ.

ಈ) 395 (ಮುನ್ನೂರ ತೊಂಭತ್ತೈದು) ಹುಲಿಗಳಿವೆ. (1997-98)ನೇ ಸಾಲಿನಲ್ಲಿ ಕೈಗೊಂಡ ಅಂದಾಜಿನಂತೆ).

ಚಾಮರಾಜ ನಗರದಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣ

248 (580) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚಾಮರಾಜನಗರದಲ್ಲಿ ಜಿಲ್ಲಾ ಕ್ರೀಡಾಂಗಣ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಹೊ ಕ್ರೀಡಾಂಗಣ ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ. ಲೀಲಾದೇವಿ. ಆರ್. ಪ್ರಸಾದ್ (ಯುವಜನ ಸೇವೆ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಬಂದಿದೆ.

ಆ) ಸೂಕ್ತ ನಿವೇಶನ ಮೊರಕಿದ ಕೂಡಲೇ ಕ್ರೀಡಾಂಗಣ ನಿರ್ಮಾಣದ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು. ನಬಾರ್ಡ್ ಯೋಜನೆಯಡಿಯಲ್ಲಿ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿದ ಹಣ.